ಅಲ್ಲೇ ಮರಿಗಳಿಗೆ ಜನ್ಮವನ್ನೂ ಕೊಟ್ಟಿತ್ತು. ನಾವು ಪ್ರಾಯಶಃ ಎರಡರಿಂದ ಮೂರು ಮರಿಗಳು ಒಳಗೆ ಇರಬಹುದೆಂದು ಅಂದಾಜಿಸಿದೆವು. 'ಒಮ್ಮೊಮ್ಮೆ ಈ ಹಕ್ಕಿ ಐದಾರು ಮರಿಗಳಾಗುವಷ್ಟು ಮೊಟ್ಟೆಗಳ ಇಡುತ್ತದೆ. ಗಂಡು ಮತ್ತು ಹೆಣ್ಣು ಹಕ್ಕಿ ಆಹಾರವನ್ನು ತರುವ ಸಮಯದ ಆಧಾರದ ಮೇಲೆ ಗೂಡಿನೊಳಗೆ ಇರಬಹುದಾದ ಮರಿಗಳ ಲೆಕ್ಕವನ್ನು ಅಂದಾಜು ಮಾಡಬಹುದು' ಎಂದು ನಮ್ಮ ಜೊತೆಗಿದ್ದ ಹಿರಿಯ ಛಾಯಾಚಿತ್ರಗಾರ ಮಂಜುನಾಥ್ ರಾವ್ ಹೇಳಿದರು.

ಅವನು ಹಸಿರುಗಟ್ಟಿದ್ದ ಮರದ ಕೊಂಬೆಯನ್ನು ತೋರಿಸಿ 'ಅದು ಅಲ್ಲಿ ಬಂದು ಕೂರುತ್ತದೆ. ಹೆಣ್ಣು ಹೆಚ್ಚು ಸಲ ಬಂದು ಹೋಗುತ್ತದೆ. ಈ ಹಕ್ಕಿಯ ದೇಹ ರಚನೆ ನೋಡಿ ಗಂಡು ಹೆಣ್ಣಿನ ವ್ಯತ್ಯಾಸ ಅಷ್ಟು ಸುಲಭಕ್ಕೆ ಗುರ್ತಿಸಲು ಆಗುವುದಿಲ್ಲ. ಗಂಡು ಗಾತ್ರದಲ್ಲಿ ಕೊಂಚ ದೊಡ್ಡದಿರುತ್ತೆ. ಯಾವುದಕ್ಕೂ ನೀವು ಗಂಟೆಗಟ್ಟಲೆ ಕಾಯಬೇಕು. ನೀವು ಸಣ್ಣ ಶಬ್ದ ಕೂಡ ಮಾಡುವಂತಿಲ್ಲ. ಬೇಗ ಇಲ್ಲಿ ಅವಿತು ಕೂತು ಬಿಡಿ' ಎಂದು ಅಡ್ಡಂಬಡ್ಡವಾಗಿ ಮಳೆಗೆ ಕಟ್ಟಿದ್ದ ಪ್ಲಾಸ್ಟಿಕ್‌ನ ಅಡಗುತಾಣ ತೋರಿದ. ಹಾವುಗಳಂತೆ ನುಸುಳಿ ಕೆಸರಿನಲ್ಲಿ ಟ್ರೈಪ್ಯಾಡುಗಳ ಹೂತು ಅದಕ್ಕೆ ಕ್ಯಾಮೆರಾಗಳನ್ನು ಸಿಗಿಸಿಕೊಂಡೆವು. ಎರಚಲು ಹೊಡೆಯುವ ಮಳೆಗೆ ಲೆನ್ಸುಗಳು ಒದ್ದೆಯಾಗದಂತೆ ಕವರು ಹಾಕಿಕೊಂಡೆವು. ಅಲ್ಲಾಡಲೂ ಕಿರು ಜಾಗವೂ ಇಲ್ಲದ ಇಲ್ಲಿಯೇ ನಾವು ಎರಡು ದಿನ ಕಳೆಯಬೇಕು.

ಅರ್ಧ ಗಂಟೆ ಕಳೆಯುವುದರಲ್ಲಿ ಎಲ್ಲೆಂದಿಲೋ ಮಿಂಚಿನಂತೆ ಬಂದು ನನ್ನ ಕನಸಿನ ಹಕ್ಕಿ ಕೂತೇ ಬಿಟ್ಟಿತು. ನಾನು ಪಟ ತೆಗೆಯದೇ ದಿಗ್ಭ್ರಮೆಗೊಂಡು ಅತೀವ ಸಂತೋಷದ ಕಣ್ಣುಗಳಿಂದ ಅದನ್ನೇ ನೋಡತೊಡಗಿದೆ. ಅದರ ರಂಗಾದ ಮೈ ಬಣ್ಣಗಳು, ಅತೀವ ಚೆಲುವಿನ ಕೆಂಪನೆಯ ಕೊಕ್ಕು, ಕೂತು ಅತ್ತಿತ್ತ ತಿರುಗಿ ಕತ್ತನ್ನು ಕುಣಿಸಿದ ರೀತಿ ಕಂಡು ರೋಮಾಂಚಿತನಾದೆ. ನನ್ನ ಆನಂದಕ್ಕೆ ಕೊನೆಯೇ ಇರಲಿಲ್ಲ. ಎಲ್ಲರೂ ನನ್ನಷ್ಟೇ ಹರ್ಷಗೊಂಡಿದ್ದರು. ಮತ್ತೆ ಎರಡು ದಿನ ಅದನ್ನು ಮತ್ತೆ ಮತ್ತೆ ಬೇಸರವೇ ಇಲ್ಲದಂತೆ ನೋಡಿದೆವು. ಚಿತ್ರಗಳ ಬಿಡುವಿಲ್ಲದೆ ಚಚ್ಚಿಕೊಂಡೆವು. ದಿನಕ್ಕೆ ಕನಿಷ್ಠ ಏಳೆಂಟು ಸಲ ಆ ಹಕ್ಕಿ ಘಟಾರೆಂದು ಬಂದು ವೇಗವಾಗಿ ವಾಪಸ್ಸು ಹಾರಿ ಹೋಗುತ್ತಿತ್ತು.



ಹದಿನಾರು ದಿನ ಗೂಡಿನಲ್ಲಿಟ್ಟು ತನ್ನ ಮರಿಗಳನ್ನು ಸಾಕುವ ಈ ಮಿಂಚುಳ್ಳಿ ದಿನ ದಿನವೂ ತನ್ನ ಮರಿಗಳಿಗೆ ಕೊಡುವ ಊಟದ ಪ್ರಮಾಣವನ್ನು ಬದಲಾಯಿಸುತ್ತದೆ. ಜೇಡ, ಸಣ್ಣ ಏಡಿಗಳನ್ನು ಮೊದಮೊದಲು ಹಿಡಿದು ತಂದು ಕೊಡುವ ಹಕ್ಕಿ ನಂತರ ದೊಡ್ಡ ಗಾತ್ರದ ಹಾವುರಾಣಿಗಳನ್ನು ಕೊಂದು ತಂದು ತಿನ್ನಿಸುತ್ತವೆ. ಅಪ್ಪ ಅಮ್ಮ ಇಬ್ಬರೂ ಬಿಡುವಿಲ್ಲದೆ ಮಕ್ಕಳಿಗೆ ಹಿಡಿದು ತರುವ ನಾನಾ ಬಗೆಯ ಜೀವಿಗಳ ನೋಡುವುದೇ ಒಂದು ಸೋಜಿಗ. ಇಲ್ಲಿ ಸಂಕಷ್ಟವೆಂದರೆ ಮಂದವಾದ ಬೆಳಕಿನಲ್ಲಿ ನಡೆಯುವ ಈ ಹಕ್ಕಿಯ ಎಲ್ಲಾ ಚಟುವಟಿಕೆಗಳನ್ನು ಪೋಟೊವಾಗಿ ರೂಪಿಸುವುದು ಅತ್ಯಂತ ಸವಾಲಿನ ಕೆಲಸ. ಮಕ್ಕಳಿಗೆ ಊಟವನ್ನು ಹೊತ್ತು ತರುವ ಮಿಂಚುಳ್ಳಿ ತನ್ನ ಗೂಡಿಗೆ ಹೋಗುವ ಮೊದಲು ಒಮ್ಮೆ ಹಸಿರು ಕೊಂಬೆ ಮೇಲೆ ಬಂದು ಕೂರುತ್ತದೆ. ಎಡಕ್ಕೊಮ್ಮೆ ಬಲಕ್ಕೊಮ್ಮೆ ತಿರುಗಿ ನೋಡಿ ಯಾರಾದರೂ ಶತ್ರುಗಳು ತನ್ನನ್ನು ಹಿಂಬಾಲಿಸಿ ಬಂದಿದ್ದಾರೆಯೇ ಎಂದು ಪರಿಶೀಲಿಸಿಕೊಳ್ಳುತ್ತದೆ. ನಂತರ ಒಮ್ಮೆಗೇ ಮಿಂಚಿನಂತೆ ಹಾರಿ ಹೋಗಿ ಗೂಡು ನುಸುಳಿ ಕ್ಷಣ ಮಾತ್ರದಲ್ಲಿ ಉಣಿಸಿ ಹೊರಬರುತ್ತದೆ. ಬರುವಾಗ ಮಕ್ಕಳು ಮಾಡಿದ